## ಇದೇ ರೀತಿ ಸಭಾಂಗಣಗಳು ಈ ಕೆಳಕಂಡ ಸ್ಥಳಗಳಲ್ಲಿ ಲಭ್ಯವಿರುತ್ತವೆ

**ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಂಗಳ ಮಂಟಪ, ಹೆಚ್.ಡಿ. ಕೋಟೆ**
ಫೋನ್: 08228–255244
ಮೊಬೈಲ್: 9902418985 (ವ್ಯವಸ್ಥಾಪಕರು)

**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸಭಾ ಭವನ ಗೋಪಿಶೆಟ್ಟಿಯೂರು, ರಾಮಾಪುರ, ಹನೂರು ತಾಲ್ಲೂಕು**
ಫೋನ್: 08225–2744353
ಮೊಬೈಲ್: 9449994081 (ವ್ಯವಸ್ಥಾಪಕರು)

**ಶ್ರೀ ಸಿದ್ಧನಂಜ ದೇಶಿಕೇಂದ್ರ ಮಂಗಳ ಮಂಟಪ, ಸುತ್ತೂರು ಶ್ರೀಕ್ಷೇತ್ರ**
ಫೋನ್: 08221–211090, 232044, 232217

**ಜಗದ್ಗುರು ಶ್ರೀ ಶಿವರಾತ್ರೀಶ್ವರ ಅನುಭವ ಮಂಟಪ, ಗುಂಡ್ಲುಪೇಟೆ**
ಫೋನ್: 08229–224042
ಮೊಬೈಲ್: 9902142388 (ವ್ಯವಸ್ಥಾಪಕರು)

**ಶ್ರೀ ಶಿವರಾತ್ರೀಶ್ವರ ಶಿವಾನುಭವ ಮಂದಿರ, ಸರಗೂರು**
ಫೋನ್: 08228–265763
ಮೊಬೈಲ್: 8453933077 (ವ್ಯವಸ್ಥಾಪಕರು)

**ಸುತ್ತೂರು ಶ್ರೀ ಶಿವರಾತ್ರೀಶ್ವರ ಮಂಗಳ ಮಂಟಪ, ನಂಜನಗೂಡು**
ಫೋನ್: 08221–223116
ಮೊಬೈಲ್: 9448750381 (ವ್ಯವಸ್ಥಾಪಕರು)

**ಜಗದ್ಗುರು ಶ್ರೀ ಶಿವರಾತ್ರೀಶ್ವರ ಸಭಾಭವನ, ಟಿ. ನರಸೀಪುರ**
ಫೋನ್: 08227–261900
ಮೊಬೈಲ್: 9986862809 (ವ್ಯವಸ್ಥಾಪಕರು)

## ಅತಿಥಿಗೃಹಗಳು

**ಶ್ರೀ ಸುತ್ತೂರು ಮಠ, ಶ್ರೀ ಮಲೆ ಮಹದೇಶ್ವರ ಬೆಟ್ಟ**
**ಹನೂರು ತಾಲ್ಲೂಕು**
ಫೋನ್: 08225–272161, 272162, 9740255322 (ವ್ಯವಸ್ಥಾಪಕರು)
ಇ–ಮೇಲ್: sutturmathmmhills@gmail.com

**ಶ್ರೀ ಸುತ್ತೂರು ಮಠ, ಬಿಳಿಗಿರಿರಂಗನ ಬೆಟ್ಟ**
**ಯಳಂದೂರು ತಾಲ್ಲೂಕು**
ಫೋನ್: 9483553515 (ವ್ಯವಸ್ಥಾಪಕರು)

**ಶ್ರೀ ರಾಜೇಂದ್ರ ಕೃಪ, ಸುತ್ತೂರು ಶ್ರೀಕ್ಷೇತ್ರ**
ಫೋನ್: 0821–232033, 8896964242

**ಶ್ರೀ ಘನಲಿಂಗ ಶಿವಯೋಗಿ ಅತಿಥಿಗೃಹ, ಸುತ್ತೂರು ಶ್ರೀಕ್ಷೇತ್ರ**
ಫೋನ್: 0821–232033, 8896964242

**ಶ್ರೀ ಚೆನ್ನವೀರ ದೇಶಿಕೇಂದ್ರ ಗುರುಕುಲ, ಸುತ್ತೂರು ಶ್ರೀಕ್ಷೇತ್ರ**
ಫೋನ್: 0821–232033, 8896964242

**ಶ್ರೀ ನಿಜಲಿಂಗ ಶಿವಾಚಾರ್ಯ ಕುಟೀರ, ಸುತ್ತೂರು ಶ್ರೀಕ್ಷೇತ್ರ**
ಫೋನ್: 0821–232033, 8896964242

**ಶ್ರೀ ಸುತ್ತೂರು ನಾಡುಮಠ, ಮುಡುಕುತೊರೆ, ಟಿ. ನರಸೀಪುರ ತಾಲ್ಲೂಕು**
ಫೋನ್: 08227–273434 * ಮೊಬೈಲ್: 9980028895 (ವ್ಯವಸ್ಥಾಪಕರು)

**ಜೆಎಸ್ಎಸ್ ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಕೇಂದ್ರ**
ಶ್ರೀ ಸುತ್ತೂರು ಭವನ, # 18&19, ಸೆಕ್ಟರ್ VI, ಪ್ರೆಸ್ ಎನ್‌ಕ್ಲೆವ್ ಮಾರ್ಗ್,
ಪುಷ್ಪ ವಿಹಾರ್, ಸಾಕೇತ್, ನವದೆಹಲಿ–110 017
ಫೋನ್: 011–29564528 * ಮೊಬೈಲ್: 981866645, 9871107609

**ಶ್ರೀ ಸುತ್ತೂರು ಮಠ, ಊಟಿ ಶಾಖೆ**
ಜೆಎಸ್ಎಸ್ ಫಾರ್ಮಸಿ ಕಾಲೇಜು ಆವರಣ, ರಾಕ್‌ಲ್ಯಾಂಡ್ಸ್,
ಪೋಸ್ಟ್ ಬಾಕ್ಸ್ ನಂ. 20, ಊಟಿ–643 001, ತಮಿಳುನಾಡು
ಫೋನ್: 0423–2445267 * ಮೊಬೈಲ್: 9489044575

ಜಗದ್ಗುರು
ಶ್ರೀ ವೀರಸಿಂಹಾಸನ
ಮಹಾಸಂಸ್ಥಾನ ಮಠ
ಸುತ್ತೂರು ಶ್ರೀಕ್ಷೇತ್ರ

# ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ

ಸುತ್ತೂರು ಶ್ರೀಕ್ಷೇತ್ರ

## ಶ್ರೀ ಸುತ್ತೂರು ನಾಡುಮಠ

## ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಂಗಳ ಮಂಟಪ



**ಮುಡುಕುತೊರೆ**
**ಟಿ. ನರಸೀಪುರ ತಾಲ್ಲೂಕು**

ಫೋನ್: 08227–273434
ಮೊಬೈಲ್: 9980028895 (ವ್ಯವಸ್ಥಾಪಕರು)



# ಶ್ರೀ ಸುತ್ತೂರು ಮಠ

ಸುತ್ತೂರು ಶ್ರೀಮಠ ಎಂದೇ ಪ್ರಸಿದ್ಧವಾಗಿರುವ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠವು ಸಾವಿರ ವರ್ಷಗಳಿಗೂ ಹಿಂದೆ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳಿಂದ ಸ್ಥಾಪಿತವಾಯಿತು. ಅಂದಿನಿಂದಲೂ ನಿರಂತರವಾಗಿ ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸೇವಾ ಕೈಂಕರ್ಯವನ್ನು ನಡೆಸುತ್ತಾ ಬಂದಿದೆ. ಶ್ರೀಮಠವು ತನ್ನ ಚಟುವಟಿಕೆಗಳನ್ನು ರಾಜ್ಯದ ಕೆಲವು ಜಿಲ್ಲೆಗಳು, ಇತರ ರಾಜ್ಯಗಳು ಹಾಗೂ ವಿದೇಶಗಳಿಗೂ ವಿಸ್ತರಿಸಿದೆ. ಸುತ್ತೂರು ಶ್ರೀಕ್ಷೇತ್ರ ಹಾಗೂ ಶಾಖಾಮಠಗಳಲ್ಲಿ ಭಕ್ತಾದಿಗಳು ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ಸಭಾಭವನಗಳು, ಮಂಗಳ ಮಂಟಪಗಳು ಹಾಗೂ ಅತಿಥಿಗೃಹಗಳಿವೆ.

## ಸಭಾಂಗಣ

ಮೈಸೂರು ಜಿಲ್ಲೆ, ಟಿ. ನರಸೀಪುರ ತಾಲ್ಲೂಕು, ಮುಡುಕುತೊರೆ ಶ್ರೀಕ್ಷೇತ್ರವು 'ಅಭಿನವ ಶ್ರೀಶೈಲ'ವೆಂದು ಪ್ರಸಿದ್ಧವಾಗಿದೆ. ಸುತ್ತೂರು ಶ್ರೀಮಠಕ್ಕೂ ಮುಡುಕುತೊರೆಗೂ ಹಿಂದಿನಿಂದಲೂ ಗಾಢವಾದ ಸಂಬಂಧವಿದೆ. ಮುಡುಕುತೊರೆ ಬೆಟ್ಟದ ತಪ್ಪಲಿನಲ್ಲಿ ಸುತ್ತೂರು ಶ್ರೀಮಠದ ಶಾಖಾಮಠವಿದ್ದು, ಇದು 'ನಾಡುಮಠ' ಎಂದೇ ಖ್ಯಾತಿ ಪಡೆದಿದೆ. ಮುಡುಕುತೊರೆ ಜಾತ್ರೆಯ ಸಂದರ್ಭದಲ್ಲಿ, ಉತ್ಸವಮೂರ್ತಿಯನ್ನು ಬೆಟ್ಟದ ಮೇಲಿಂದ ತೆಪ್ಪೋತ್ಸವಕ್ಕೆ ಬಿಜ್ಜಂಗೈಸುವಾಗ ನಾಡುಮಠಕ್ಕೆ ಕರೆತಂದು ವಿಶೇಷ ಪೂಜೆ ಸಲ್ಲಿಸುವ ಸಂಪ್ರದಾಯವಿತ್ತು.

ಶ್ರೀಮಠದ 19ನೆಯ ಜಗದ್ಗುರುಗಳಾದ ಶ್ರೀ ಮಹಾಂತ ದೇಶಿಕೇಂದ್ರರು ಮುಡುಕುತೊರೆಯಲ್ಲಿ ಪ್ರತಿ ವರ್ಷವೂ ಧಾರ್ಮಿಕ ಸಭೆ ನಡೆಯುವಂತೆ ವ್ಯವಸ್ಥೆ ಮಾಡಿದರು. 20ನೆಯ ಜಗದ್ಗುರುಗಳಾದ ಶ್ರೀ ಸಿದ್ಧಲಿಂಗ ಶಿವಾಚಾರ್ಯರು ಶಿಥಿಲವಾಗಿದ್ದ ನಾಡುಮಠವನ್ನು ಪುನರ್‌ನಿರ್ಮಿಸಿ ಜಾತ್ರೆಗೆ ಬರುವ ಭಕ್ತಾದಿಗಳ ಜ್ಞಾನನ್ನ ದಾಸೋಹಕ್ಕೆ ಹಾಗೂ ಧಾರ್ಮಿಕ ಸಭೆಯ ಮುಂದುವರಿಕೆಗೆ ಸೂಕ್ತ ವ್ಯವಸ್ಥೆ ಕಲ್ಪಿಸಿದರು. ಮಂತ್ರಮಹರ್ಷಿ ಜಗದ್ಗುರು ಶ್ರೀ ಶಿವರಾತ್ರಿ ಮಹಾಸ್ವಾಮಿಗಳವರು ಈ ವ್ಯವಸ್ಥೆಯನ್ನು ಅನೂಚಾನವಾಗಿ ಮುಂದುವರಿಸಿಕೊಂಡು ಬಂದರು.

ಅನಂತರ, ರಾಜಗುರುತಿಲಕ, ಕಾಯಕತಪಸ್ವಿ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಬೆಳ್ಳಿಪಲ್ಲಕ್ಕಿ ಉತ್ಸವ ಹಾಗೂ ಧಾರ್ಮಿಕ ಸಭೆ ಮುಂತಾದ ಕಾರ್ಯಕ್ರಮಗಳು ಯಥಾರೀತಿ ಮುಂದುವರಿದವು. ಶುಭಕಾರ್ಯಗಳನ್ನು ನೆರವೇರಿಸಲು ಅನುಕೂಲವಾಗುವಂತೆ ಮಂಗಳ ಮಂಟಪವನ್ನು ನಿರ್ಮಿಸಲಾಗಿದೆ.

## ಅತಿಥಿಗೃಹ

ಮಂಗಳ ಮಂಟಪದ ಮೊದಲ ಅಂತಸ್ತಿನಲ್ಲಿ ಭಕ್ತರ ಅನುಕೂಲಕ್ಕಾಗಿ ಅತಿಥಿಗೃಹವಿದೆ. ಒಂಬತ್ತು ಹಾಸಿಗೆಗಳುಳ್ಳ ನಾಲ್ಕು ಕೊಠಡಿಗಳಿವೆ. ಊಟ ತಿಂಡಿ ಸಿದ್ಧಪಡಿಸಿಕೊಳ್ಳಲು ಪ್ರತ್ಯೇಕ ವ್ಯವಸ್ಥೆಯಿದೆ. ಅತಿಥಿಗೃಹಕ್ಕೆ ನೇರಪ್ರವೇಶದ ವ್ಯವಸ್ಥೆ ಇದೆ.

## ಸಭಾಭವನದ ಸೌಕರ್ಯಗಳು

- 15,700 ಚದರಡಿ ವಿಸ್ತೀರ್ಣ
- 300 ಜನರು ಕುಳಿತುಕೊಳ್ಳಬಹುದಾದ ಸಭಾಂಗಣ
- 10 ಸುಸಜ್ಜಿತ ಕೊಠಡಿಗಳು
- ಏಕಕಾಲಕ್ಕೆ 300 ಜನ ಊಟ ಮಾಡಬಹುದಾದ ಭೋಜನಶಾಲೆ
- ಆಧುನಿಕ ಸೌಲಭ್ಯವುಳ್ಳ ಪಾಕಶಾಲೆ
- ಕುಡಿಯುವ ನೀರು ಹಾಗೂ ಸ್ನಾನಕ್ಕೆ ಬಿಸಿನೀರಿನ ವ್ಯವಸ್ಥೆ
- ನಿರಂತರ ವಿದ್ಯುಚ್ಛಕ್ತಿ ಸರಬರಾಜು
- ವಾಹನ ನಿಲುಗಡೆ
  ವ್ಯವಸ್ಥೆ ಇತ್ಯಾದಿ







